

# ಯುನೆಸ್ಕೊ–ಅಮೃತಾ ವಿವಿ ಒಪ್ಪಂದ

**ಬೆಂಗಳೂರು:** 'ಯುನೆಸ್ಕೊ' ಲಿಂಗ ಸಮಾನತೆ ಮತ್ತು ಮಹಿಳಾ ಸಬಲೀಕರಣದ ಅಧ್ಯಕ್ಷ ಸ್ಥಾನಕ್ಕೆ ಅಮೃತಾ ವಿವಿಯನ್ನು ಆಯ್ಕೆ ಮಾಡಿದೆ. ಇತ್ತೀಚೆಗೆ ಪ್ಯಾರೀಸ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ 'ಯುನೆಸ್ಕೊ'ದಲ್ಲಿನ ಭಾರತದ ಶಾಶ್ವತ ಪ್ರತಿನಿಧಿಯಾಗಿರುವ ರುಚಿರ ಕಂಬೋಜಿ ಮತ್ತು ಯುನೆಸ್ಕೊದ ಉನ್ನತ ಶಿಕ್ಷಣ ವಿಭಾಗದ ಮುಖ್ಯಸ್ಥ ಡಾ.ಪೀಟರ್ ವೆಲ್ಸ್ ಹಾಗೂ ಅಮೃತಾ ವಿವಿ ಕುಲಪತಿ ಡಾ.ಪಿ.ವೆಂಕಟರಂಗನ್ ಪರಸ್ಪರ ಒಡಂಬಡಿಕೆಗೆ ಸಹಿ ಹಾಕಿದರು.

ಇದೇ ಸಂದರ್ಭದಲ್ಲಿ ಮಾತಾ ಅಮೃತಾನಂದಮಯಿ ದೇವಿ, ಮಹಿಳಾ ಸಬಲೀಕರಣದ ಸಂದೇಶ ನೀಡಿದರು. ಅಮೃತಾ ವಿವಿ ಈ ಒಂಡಂಬಡಿಕೆ ಮೂಲಕ ಲಿಂಗ ಸಮಾನತೆ ಮತ್ತು ಮಹಿಳಾ ಸಬಲೀಕರಣ ಜವಾಬ್ದಾರಿ ಪಡೆದ ಭಾರತದ ಮೊದಲ ಸಂಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಮಹಿಳೆ ಮತ್ತು ಹೆಣ್ಣು ಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಅದಕ್ಕೆ ಪರಿಹಾರ ಕಂಡುಹಿಡಿಯುವ ದಿಸೆಯಲ್ಲಿ ಅಮೃತಾ ವಿವಿ ಕಾರ್ಯನಿರ್ವಹಿಸಲಿದೆ.